ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**OS No.8/2016**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ಮಂಜುನಾಥ ಬಣಕಾರ | ಸಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : ಬಸವಣ್ಣೆಪ್ಪ | | |
| ವಯಸ್ಸು | : 49 ವರ್ಷ | | |
| ಉದ್ಯೋಗ | : ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ | | |
| ವಾಸಸ್ಥಳ | : ದಾವಣಗೆರೆ | | |

ದಿನಾಂಕ **02.09.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಜಿ ಎಂ ಕೆ ವಕೀಲರಿಂದ:

ನಾನು ದಿ: 02.06.2018 ರಿಂದ 01.08.2025 ರವರೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಅಂತಾ ತೋಟಗಾರಿಕೆ ಇಲಾಖೆ ಹಾನಗಲ್ ನಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ನಾನು ನ್ಯಾಯಾಲಯದ ನಿರ್ದೇಶನದಂತೆ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುತ್ತೇನೆ. ಆ ವರದಿಯನ್ನು ನಿಸಿ-1 ಎಂದು, ಸಾಕ್ಷಿ ಸಹಿಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಆರ್ ಪಿ ಎ ವಕೀಲರಿಂದ:

ವಾದಿ ಮತ್ತು ಪ್ರತಿವಾದಿಯರಿಗೆ ಸ್ಥಳದಲ್ಲಿ ಹಾಜರಿರಲು ದಿ: 26.04.2024 ರಂದು ನೋಟಿಸು ನೀಡಿರುತ್ತೇನೆ. ನಾನು ದಿ: 28.02.2024 ರಂದು ನ್ಯಾಯಾಲಯಕ್ಕೆ ಒಂದು ಮನವಿ ಸಲ್ಲಿಸಿ ಕಾಲಾವಕಾಶ ಕೋರಿರುತ್ತೇನೆ ಎಂದರೆ ಸರಿ. ಸದರಿ ಮನವಿಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-13 ಎಂದು ಗುರುತಿಸಲಾಯಿತು. ನಿಡಿ-13 ರ ಪ್ರಕಾರ ನಾನು ದಿ: 26.02.2024 ರಂದು 12.30 ಕ್ಕೆ ದಾವಾ ಜಮೀನಿಗೆ ಪರೀಶಿಲನೆ ಮಾಡಲು ಹೋಗಲಾಗಿತ್ತು ಅಂತಾ ತಿಳಿಸಿದ್ದೇನೆ ಎಂದರೆ ಸರಿ. ಆ ದಿನ ನಾನು ಸ್ಥಳವನ್ನು ವೀಕ್ಷಣೆ ಮಾತ್ರ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ. ಒಟ್ಟು ನಾನು 4 ಬಾರಿ ದಾವಾ ಜಮೀನಿಗೆ ಭೇಟಿ ನೀಡಿರುತ್ತೇನೆ. ದಿ: 19.04.2024 ರಂದು ಪ್ರತಿವಾದಿಯರಿಗೆ ಹಾಜರಿರಲು ನೋಟಿಸು ನೀಡಿರುತ್ತೇನೆ ಎಂದರೆ ಸರಿ. ದಿ: 03.04.2024 ರಂದು ಪ್ರತಿವಾದಿಯರ ಮನೆಗೆ ಖುದ್ದಾಗಿ ಭೇಟಿ ನೀಡಿ ನೋಟಿಸು ನೀಡಿರುತ್ತೇನೆ. ಆ ನೋಟಿಸು ಪ್ರತಿಯನ್ನು ವರದಿಯೊಂದಿಗೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು

ನನಗೆ ತೊಂದರೆ ಇರುವುದಿಲ್ಲ. ದಿಃ 19.04.2024 ರಂದು ಹಾಜರಿರಲು ಎಲ್ಲಾ ಪ್ರತಿವಾದಿಯರಿಗೆ ನೋಟಿಸು ನೀಡಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 06.05.2024 ರಂದು ನಾನು 3 ನೇ ಬಾರಿ ಭೇಟಿ ನೀಡಿರುತ್ತೇನೆ. ದಿಃ 21.06.2024 ರಂದು 4 ನೇ ಬಾರಿ ಭೇಟಿ ನೀಡಿರುತ್ತೇನೆ.

ನಾನು ಸ್ಥಳಕ್ಕೆ ಹೋದಾಗ ನನ್ನ ಜೊತೆಗೆ ಭೂ ಮಾಪನ ಇಲಾಖೆಯ ಸಹಾಯ ಭೂ ಮಾಪಕರು ಹಾಜರು ಇದ್ದರು. ಭೂ ಮಾಪಕರು ಹಾಜರು ಇದ್ದರು ಅಂತಾ ತೋರಿಸಲು ನಾನು ಪಂಚಾದಸ್ತ ಮಾಡಿರುವುದಿಲ್ಲ, ಆದರೆ ಜಿ ಪಿ ಎಸ್ ಪೊಟೋಗಳನ್ನು ತೆಗೆದಿರುತ್ತೇವೆ. ಆ ರೀತಿ ಪಂಚಾದಸ್ತ ಮಾಡಲು ಯಾವುದೇ ರೀತಿ ತೊಂದರೆ ಇರಲಿಲ್ಲ. ನಿಸಿ-1 ರ ಜೊತೆಗೆ ಹಚ್ಚಿದ ಪಿ ಟಿ ಸೀಟನ್ನು ನಾನೇ ತಯಾರಿಸಿರುತ್ತೇನೆ. ಕಾರ್ಯಸೂಚಿಯಲ್ಲಿ ಈ ರೀತಿ ಪಿ ಟಿ ಸೀಟನ್ನು ತಯಾರಿಸುವಂತೆ ಯಾವುದೇ ಸೂಚನೆ ಇರಲಿಲ್ಲ. ಕಾರ್ಯಸೂಚಿಯ ಪ್ರಕಾರ ದಾವಾ ಆಸ್ತಿ ನಂ. 120/4 ಕ್ಷೇತ್ರ 8 ಎಕರೆ 10 ಗುಂಟೆ ಇರುತ್ತದೆ. ದಾವಾ ಆಸ್ತಿ ಆರ್ ಎಸ್ ನಂ. 120/4 ಕ್ಷೇತ್ರ 8 ಎಕರೆ 10 ಗುಂಟೆ ಇದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 19.04.2024 ರಂದು ಸ್ಥಳದಲ್ಲಿ ಹಾಜರು ಇರಲು ಪ್ರತಿವಾದಿಯರಿಗೆ ಯಾವುದೇ ನೋಟಿಸು ನೀಡದೇ ವಾದಿಯರಿಗೆ ಅನುಕೂಲವಾಗಲೆಂದು ಈ ರೀತಿ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವರದಿಯಲ್ಲಿ 259 ಅಡಿಕೆ ಗಿಡಗಳನ್ನು ಯಾವ ಭಾಗದಲ್ಲಿ ಬರುತ್ತವೆ ಅಂತಾ ನಾನು ತಯಾರಿಸಿದ ನಕ್ಷೆಯಲ್ಲಿ ಗುರುತು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಕಾರ್ಯಸೂಚಿಯಲ್ಲಿ ಇರಲಿಲ್ಲ ನಾನು ನನ್ನ ರೆಫರೆನ್ಸಗೋಸ್ಕರ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ.

ಪ್ರತಿವಾದಿಯರು ನೀಡಿದ ಕಾರ್ಯಸೂಚಿಯಲ್ಲಿ ಸರ್ವೆ ನಂ. 120/4 ರ ಪೂರ್ವಕ್ಕೆ ಪ್ರತಿವಾದಿಯರ ಜಮೀನಿಗೆ ಹೊಂದಿ ಜೀವಂತ ಬೇಲಿ ಇತ್ತು, ಈ ಕುರಿತು ನಾನು ಅರಣ್ಯ ಇಲಾಖೆಯಿಂದ ವರದಿ ಪಡೆದು ಹಾಜರುಪಡಿಸಿರುತ್ತೇನೆ. ಅರಣ್ಯ ಇಲಾಖೆಯವರು ಸ್ಥಳ ಪರೀಶಿಲನೆ ಮಾಡಲು ಹೋದಾಗ ನಾನು ಹಾಜರು ಇರಲಿಲ್ಲ. ನಾನು 4 ದಿನ ಪ್ರತ್ಯೇಕವಾಗಿ ಸ್ಥಳ ಪರೀಶಿಲನೆ ಮಾಡಿದ ಬಗ್ಗೆ ದಿನಾಂಕ ಪ್ರಕಾರ ವರದಿಯನ್ನು ಸವಿಸ್ತಾರವಾಗಿ ನಮೂದು ಮಾಡಿಲ್ಲ ಎಂದರೆ ಸರಿ. ವರದಿಯೊಂದಿಗೆ ಎ ಪಿ ಎಂ ಸಿ ಯಿಂದ ಪಡೆದ ಮಾವು ಬೆಳೆಯ ಆದಾಯ ವರದಿ ಮತ್ತು ಅಡಿಕೆ ಬೆಳೆಯ ಆದಾಯ ವರದಿಗೆ ಎ ಪಿ ಎಂ ಸಿ ಅಧಿಕಾರಿಯ ಯಾವುದೇ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವುಗಳನ್ನು ನಾನು ಎ ಪಿ ಎಂ ಸಿ ವೆಬಸೈಟನಿಂದ ಆನಲೈನ ಪಡೆದಿರುತ್ತೇನೆ ಅಂತಾ ನುಡಿಯುತ್ತಾರೆ.

ನಾನು ಎ ಪಿ ಎಂ ಸಿ ವರದಿಯನ್ನು ಹಾವೇರಿ ಜಿಲ್ಲೆಗೆ ಸಂಬಂಧಿಸಿದ ಬೆಳೆಯ ಇಳುವರಿಯನ್ನು ಸಾಂಕಿಕ ಇಲಾಖೆಯಿಂದ ಆನಲೈನ ಮುಖಾಂತರ ಪಡೆದಿರುತ್ತೇನೆ. ನಾನು ಎ ಪಿ ಎಂ ಸಿ ವೆಬಸೈಟನಿಂದ ಯಾವುದೇ ದಾಖಲೆಗಳನ್ನು ಪಡೆಯದೇ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 28.02.2024 ರ ದಿನಾಂಕವನ್ನು ಹೊರತುಪಡಿಸಿ ನಾನು ಎಂದಿಗೂ ಸಹ ದಾವಾ ಜಮೀನಿಗೆ ಕಮೀಷನರ್ ಕೆಲಸದ ಕುರಿತು ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಮೇಲೆ ಹೇಳಿದ 4 ದಿನಾಂಕಗಳಿಗೆ ಸಂಬಂಧಿಸಿದಂತೆ ಸವಿಸ್ತಾರವಾದ ವರದಿಯನ್ನು ನಾನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ 5 ಎಕರೆ 16 ಗುಂಟೆ ಅಂತಾ ವಾದಿಯರು ಆಧರಿಸುವ ಆಸ್ತಿಗೆ ಸಂಬಂಧಿಸಿದಂತೆ ನಾನು ಕಮೀಷನರ್ಕೆಲಸ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಕಾರ್ಯಸೂಚಿಯ ಪ್ರಕಾರ ಕೆಲಸ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ಪ್ರತಿವಾದಿಯರು ಸಲ್ಲಿಸಿದ ದಿನಾಂಕಃ 16.04.2024 ರ ಕಾರ್ಯಸೂಚಿಯ ಪ್ರಕಾರ ಕಾರ್ಯನಿರ್ವಹಿಸಿ ಸವಿಸ್ತಾರವಾದ ವರದಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಡಿಕೆ ಮತ್ತು ಮಾವಿನ ಬಗ್ಗೆ ತೋರಿಸಿದ ಅಂಕಿಸಂಖ್ಯೆಗಳು ಪ್ರತಿವಾದಿಯರ ಜಮೀನಿನಲ್ಲಿ ಬೆಳೆದ ಬೆಳೆಗಳ ಅಂಕಿ ಸಂಖ್ಯೆಗಳನ್ನು ದಾವಾ ಆಸ್ತಿಯಲ್ಲಿ ಇರುವುದಾಗಿ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯರು ಹಾಜರುಪಡಿಸಿದ ಪಿಟಿ ಸೀಟಿಗೆ ಅನೂಕಲಕರವಾಗಲೆಂದು ಕಾನೂನುಬಾಹಿರವಾಗಿ ಒಂದು ಪಿಟಿ ಸೀಟನ್ನು ವರದಿಯೊಂದಿಗೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಾನೂನುರೀತಿಯಿಂದ ಯಾವುದೇ ಕಮೀಷನರ್ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಚೇರಿಯಲ್ಲಿ ಕುಳಿತು ಸ್ಥಳ ಪರೀಶಿಲನೆ ಮಾಡದೇ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್